ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 845(838)
2) ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 28-09-2020
4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಲ್ಲಿ ಕಾಡು ಪ್ರಾಣಿಗಳಿಂದ ದಾಳಿಗೊಳಗಾಗಿ ಮೃತರಾದವರ ಸಂಖ್ಯೆ ಎಷ್ಟು; ಯಾವ ಪ್ರಾಣಿಗಳಿಂದ ದಾಳಿಗೊಳಗಾಗಿ ಮೃತರಾಗಿರುತ್ತಾರೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಕಳೆದ 3 ವರ್ಷಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ ಪ್ರಾಣ-ಹಾನಿ ಪ್ರಕರಣಗಳು ಹಾಗೂ ಪಾವತಿಸಿದ ದಯಾತ್ಮಕಧನದ ವಿಭಾಗವಾರು / ಜಿಲ್ಲಾವಾರು ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ವಿಭಾಗ	ಮಾನವ ಪ್ರಾಣ ಹಾನಿ					
		2018-19		2019-20		2020-21 (ಸೆಪ್ಟೆಂಬರ್ 15ರವರೆಗೆ)	
		ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ
1.	ರಾಮನಗರ	1 (ಆನೆ)	5.00	2 (ಆನೆ)	10.00	2 (ಚಿರತೆ)	15.00
	ಬೆಂಗಳೂರು ಗ್ರಾಮಾಂತರ ಜಿಲ್ಲೆ						
2.	ಬೆಂಗಳೂರು ಗ್ರಾಮಾಂತರ	-	-	1 (ಆನೆ)	5.00	-	-
3.	ಬನ್ನೇರುಘಟ್ಟ ರಾ.ಉ	-	-	1 (ಆನೆ)	7.50	-	-
4.	ಕೋಲಾರ	1 (ಆನೆ)	5.00	4 (ಆನೆ)	30.00	2 (ಆನೆ)	7.50*
5.	ಚಿಕ್ಕಬಳ್ಳಾಪುರ	-	-	-	-	-	-
6.	ಬೆಳಗಾವಿ	1 (ಕರಡಿ)	5.00	-	-	-	-
7.	ಬಾಗಲಕೋಟೆ	1 (ಮೊಸಳೆ)	5.00	1 (ಮೊಸಳೆ)	5.00	1 (ಮೊಸಳೆ)	7.50
8.	ಬಿಜಾಪುರ	1 (ಮೊಸಳೆ)	5.00	-	-	-	-
9.	ಬಳ್ಳಾರಿ	3 (ಚಿರತೆ)	15.00	1 (ಕರಡಿ) 1 (ಮೊಸಳೆ)	12.50	-	-
10.	ಚಿತ್ರದುರ್ಗ	-	-	1 (ಕರಡಿ)	5.00	-	-
11.	ದಾವಣಗೆರೆ	-	-	-	-	-	-
12.	ಕೊಪ್ಪಳ	-	-	-	-	-	-
	ಚಾಮರಾಜನಗರ ಜಿಲ್ಲೆ						
13.	ಬಿ.ಆರ್.ಟಿ	3 (ಆನೆ)	15.00	1 (ಆನೆ)	5.00	-	-
14.	ಕಾವೇರಿ	1 (ಆನೆ)	5.00	1 (ಆನೆ)	5.00	-	-
15.	ಮಲೈ ಮಹದೇಶ್ವರ	1 (ಆನೆ)	5.00	4 (ಆನೆ)	20.00	1 (ಆನೆ)	*
16.	ಬಂಡೀಪುರ	1 (ಆನೆ)	5.00	3 (ಆನೆ) 2 (ಹುಲಿ)	27.50		

ಚಿಕ್ಕಮಗಳೂರು ಜಿಲ್ಲೆ							
17.	ಚಿಕ್ಕಮಗಳೂರು	2 (ಆನೆ)	10.00	2 (ಆನೆ) 1 (ಕಾಡುಹಂದಿ)	15.00	–	–
18.	ಭದ್ರಾ	–	–	–	–	–	–
19.	ಕೊಪ್ಪ	1 (ಕಾಡುಕೋಣ)	5.00	1 (ಕಾಡುಕೋಣ)	5.00	–	–
20.	ಧಾರವಾಡ	–	–	–	–	–	–
21.	ಗದಗ	–	–	–	–	–	–
22.	ಹಾವೇರಿ	–	–	–	–	–	–
23.	ಬೀದರ್	–	–	1 (ಕರಡಿ)	7.50	–	–
24.	ಕಲುಬರಗಿ	1 (ಕಾಡುಹಂದಿ)	5.00	1 (ಕಾಡುಹಂದಿ)	5.00	2 (ಕಾಡುಹಂದಿ)	15.00
25.	ರಾಯಚೂರು	–	–	1 (ತೋಳ)	7.50	–	–
26.	ಯಾದಗಿರಿ	–	–	1 (ಮೊಸಳೆ)	5.00	–	–
ಹಾಸನ ಜಿಲ್ಲೆ							
27.	ಹಾಸನ	1 (ಆನೆ)	5.00	3 (ಆನೆ)	15.00	1 (ಆನೆ)	7.50
28.	ತುಮಕೂರು	1 (ಕರಡಿ)	5.00	1 (ಆನೆ) 4 (ಚಿರತೆ)	32.50		
ಕೊಡಗು ಜಿಲ್ಲೆ							
29.	ಮಡಿಕೇರಿ	–	–	2 (ಆನೆ)	12.50	3 (ಆನೆ)	22.50
30.	ವಿರಾಜಪೇಟೆ	–	–	1 (ಆನೆ) 1 (ಕಾಡುಕೋಣ)	12.50	1 (ಆನೆ)	*
31.	ಮಡಿಕೇರಿ ವಜೀ	–	–	1 (ಆನೆ)	5.00		
ಉಡುಪಿ ಜಿಲ್ಲೆ							
32.	ಕುಂದಾಪುರ	1 (ಕಾಡುಹಂದಿ)	5.00	1 (ಜಿಂಕೆ) 2 (ಕಾಡುಕೋಣ)	15.00	–	–
33.	ಮಂಡ್ಯ	1 (ಮೊಸಳೆ)	5.00	–	–	–	–
ಮೈಸೂರು ಜಿಲ್ಲೆ							
34.	ಮೈಸೂರು	–	–	2 (ಆನೆ)	12.50		
35.	ನಾಗರಹೊಳೆ	1 (ಆನೆ) (3 ಹುಲಿ)	20.00	–	–	(1 ಹುಲಿ)	7.50
	ಒಟ್ಟು	26	130.00	49	265.00	14	75.00

* 2020-21ನೇ ಸಾಲಿನಲ್ಲಿ ಮೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ವಾರಸುದಾರರ ದಾಖಲೆಗಳು ಸಲ್ಲಿಕೆಯಾದ ನಂತರ ದಯಾತ್ಮಕಧನ ಪಾವತಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಆ)	ಕಾಡು ಪ್ರಾಣಿ ಮತ್ತು ಮಾನವ ಸಂಘರ್ಷವನ್ನು ತಡೆಯಲು ಸರ್ಕಾರ ಯಾವ ಕ್ರಮಕೈಗೊಂಡಿದೆ; ಕಾಡು ಪ್ರಾಣಿಗಳ ದಾಳಿಯಿಂದ ಮೃತರಾದವರಿಗೆ ಎಷ್ಟು ಪರಿಹಾರ ನೀಡಲಾಗುತ್ತಿದೆ;	ವನ್ಯಪ್ರಾಣಿ-ಮಾನವ ಸಂಘರ್ಷವನ್ನು ತಡೆಗಟ್ಟಲು ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1. ರಾಜ್ಯದಲ್ಲಿರುವ ವನ್ಯಜೀವಿಗಳಿಗೆ ಸಂಪೂರ್ಣ ರಕ್ಷಣೆ ನೀಡುವ ಸಲುವಾಗಿ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ, ಹುಲಿ ಮೀಸಲು ಅರಣ್ಯ, ಸಂರಕ್ಷಿತ ಮೀಸಲು ಅರಣ್ಯಗಳನ್ನು ಘೋಷಿಸಲಾಗಿರುತ್ತದೆ. 2. ಅರಣ್ಯ ಪ್ರದೇಶದಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು 2019-20ನೇ ಸಾಲಿನಿಂದ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಹಂತ ಹಂತವಾಗಿ ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅವಕಾಶ ಮಾಡಲಾಗಿದೆ. 3. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ. 4. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. 5. ಕಳ್ಳಬೇಟೆ ತಡೆ ಶಿಬಿರಗಳಿಗೆ ಹಾಗೂ Rapid Response Teams (RRT) ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ Wireless Networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ. 6. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆಕಾರ್ಯನಿರ್ವಹಿಸುವ ಮಾಹಿತಿಕೇಂದ್ರ ಸ್ಥಾಪಿಸಲಾಗಿದೆ. 7. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋಕಾಲರ್ ಅಳವಡಿಸಿ ಆನೆಗಳ ಚಲನವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ. 8. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ. 9. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ-ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದ್ಯತೆ ಮೇರೆಗೆ ನಿಯಮಾನುಸಾರ ಪರಿಶೀಲಿಸಿ, ನೇರವಾಗಿ ಸಂತ್ರಸ್ತರ ಖಾತೆಗೆ ಶೀಘ್ರವೇ ಹಣ ಪಾವತಿಸುವ ಪ್ರಕ್ರಿಯೆಯನ್ನು ಇ-ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ. ಪ್ರಸುತ ಆದೇಶ ಸಂಖ್ಯೆ: ಅಪಜೀ 66 ಎಫ್‌ಡಬ್ಲ್ಯುಎಲ್ 2019, ದಿನಾಂಕ: 07-01-2020ರ ಪ್ರಕಾರ ವನ್ಯಪ್ರಾಣಿಗಳಿಂದ ಮೃತಪಟ್ಟಿರುವ ವ್ಯಕ್ತಿಯ ವಾರಸುದಾರರಿಗೆ ಪಾವತಿಸುತ್ತಿರುವ ದಯಾತ್ಮಕಧನವನ್ನು ರೂ.5,00,000/- ಗಳಿಂದ ರೂ.7,50,000/- ಗಳಿಗೆ ಹೆಚ್ಚಿಸಲಾಗಿದೆ. ಅಲ್ಲದೆ, ಆದೇಶ ಸಂಖ್ಯೆ: ಅಪಜೀ 61 ಎಫ್‌ಎಪಿ 2018, ದಿನಾಂಕ: 16-10-2018 ರಂತೆ ಮೃತರ ಕುಟುಂಬದ ವಾರಸುದಾರರಿಗೆ 05 ವರ್ಷಗಳವರೆಗೆ ರೂ.2,000/-ಗಳ ಮಾಸಾಶನವನ್ನು ಸಹ ನೀಡಲಾಗುತ್ತಿದೆ.

ಇ)	ಕಾಡು ಪ್ರಾಣಿಗಳಿಂದ ಹಾನಿಗೊಳಗಾದ ರೈತರ ಬೆಳೆಗಳಿಗೆ ಕಳೆದ ಎರಡು ವರ್ಷಗಳಲ್ಲಿ ನೀಡಿದ ಪರಿಹಾರವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	2018-19 ಮತ್ತು 2019-20ನೇ ಸಾಲಿಗೆ ಜಿಲ್ಲಾ / ವಿಭಾಗವಾರು ಬೆಳೆಹಾನಿ ಪ್ರಕರಣಗಳಲ್ಲಿ ಪಾವತಿಸಲಾದ ದಯಾತ್ಮಕಧನದ ವಿವರ:

(ರೂ.ಗಳಲ್ಲಿ)

ಕ್ರ.ಸಂ	ಜಿಲ್ಲೆ / ವಿಭಾಗ	2018-19		2019-20	
		ಪ್ರಕರಣ	ಮೊತ್ತ	ಪ್ರಕರಣ	ಮೊತ್ತ
1.	ರಾಮನಗರ	2471	1,15,20,777.00	1161	57,68,739.00
2.	ಬೆಂಗಳೂರು ನಗರ	29	2,30,000.00	47	3,60,759.00
		2500	1,17,50,777.00	1208	61,29,498.00
ಬೆಂಗಳೂರು ಗ್ರಾಮಾಂತರ					
3.	ಬೆಂಗಳೂರು ಗ್ರಾ	543	48,40,844.00	24	2,82,500.00
4.	ಬನ್ನೇರುಘಟ್ಟರಾ.ಉ	781	26,34,280.00	595	26,61,391.00
	ಒಟ್ಟು	1324	74,75,124.00	619	29,43,891.00
5.	ಕೋಲಾರ	509	39,51,800.00	1488	55,42,000.00
6.	ಚಿಕ್ಕಬಳ್ಳಾಪುರ	17	1,47,000.00	13	1,50,000.00
7.	ಬಾಗಲಕೋಟೆ	1	10,000.00	0	0
8.	ಬೆಳಗಾವಿ	697	60,11,849.00	1061	56,41,200.00
9.	ವಿಜಯಪುರ	-	-	-	-
10.	ಗೋಕಾಕ್	1	20,000.00	2	11,200.00
11.	ರಾಯಚೂರು	-	-	-	-
12.	ಬಳ್ಳಾರಿ	139	4,42,590	124	5,23,229.00
13.	ಚಿತ್ರದುರ್ಗ	92	17,98,884	0	0
14.	ದಾವಣಗೆರೆ	340	13,33,425	1	1,440.00
15.	ಕೊಪ್ಪಳ	-	-	1	34,564.00
ಚಾಮರಾಜನಗರ ಜಿಲ್ಲೆ					
16.	ಬಿ.ಆರ್.ಟಿ ವಜೀ	126	6,48,234	264	18,74,066.00
17.	ಕಾವೇರಿ ವಜೀ	1240	53,10,611	855	53,36,000.00
18.	ಮಲೈ ಮಹದೇಶ್ವರ ವಜೀ	202	19,31,016	230	17,36,167.00
19.	ಬಂಡೀಪುರ	1542	45,87,594	3618	1,20,68,467.00
	ಒಟ್ಟು	3110	1,24,77,455.00	4967	2,10,14,700.00
ಚಿಕ್ಕಮಗಳೂರು ಜಿಲ್ಲೆ					
20.	ಭದ್ರಾ ವಜೀ	43	4,68,000	70	9,30,000.00
21.	ಚಿಕ್ಕಮಗಳೂರು	1759	1,05,59,059	1062	88,64,000.00
22.	ಕೊಪ್ಪ	144	11,95,850	114	10,56,860.00
	ಒಟ್ಟು	1946	1,22,22,909.00	1246	1,08,50,860.00
23.	ಧಾರವಾಡ	157	9,92,000	78	13,00,000.00
24.	ಗದಗ	1330	22,65,000	285	5,23,688.00
25.	ಹಾವೇರಿ (ರಾಣೇಬೆನ್ನೂರು)	1589	49,55,000	453	17,31,511.00
26.	ಬೀದರ್	234	10,82,000	193	10,00,000.00
27.	ಕಲುಬರಗಿ	20	95,065	2	5,000.00
28.	ಯಾದಗಿರಿ	50	1,79,000	0	0
ಉತ್ತರ ಕನ್ನಡ ಜಿಲ್ಲೆ					
29.	ದಾಂಡೇಲಿ	71	3,71,878	38	2,68,500.00
30.	ಹಳಿಯಾಳ	506	16,26,578	150	7,61,000.00

31.	ಹೊನ್ನಾವಾರ	2	47,400	4	81,000.00
32.	ಕಾರವಾರ	–	–	13	1,63,200.00
33.	ಶಿರಸಿ	168	6,17,000	180	9,10,000.00
34.	ಯಲ್ಲಾಪುರ	347	31,67,363	208	17,06,000.00
	ಒಟ್ಟು:	1094	58,30,219.00	593	38,89,700.00
	ಹಾಸನ ಜಿಲ್ಲೆ				
35.	ಹಾಸನ	3018	1,51,71,939	2184	1,28,53,426.00
36.	ತುಮಕೂರು	824	36,47,363	152	8,81,210.00
		3842	1,88,19,302.00	2336	1,37,34,636.00
	ಕೊಡಗು ಜಿಲ್ಲೆ				
37.	ಮಡಿಕೇರಿ	1492	73,84,156	1259	73,03,000.00
38.	ವಿರಾಜಪೇಟೆ	1707	1,04,17,453	1146	84,61,000.00
39.	ಮಡಿಕೇರಿ ವಜೀ	615	28,45,248	1193	71,05,000.00
40.	ನಾಗರಹೊಳೆ	447	25,18,000	894	50,98,167.00
	ಒಟ್ಟು	4261	2,31,64,857.00	4492	2,79,67,167.00
	ಉಡುಪಿ ಜಿಲ್ಲೆ				
41.	ಕುದುರೆಮುಖ ವಜೀ	129	10,24,965	59	3,58,938.00
42.	ಕುಂದಾಪುರ	461	22,15,495	126	7,05,956.00
	ಒಟ್ಟು	590	32,40,460.00	185	10,64,894.00
43.	ಮಂಗಳೂರು	76	10,10,074	86	12,71,174.00
	ಮೈಸೂರು ಜಿಲ್ಲೆ				
44.	ಮೈಸೂರು	1996	63,47,916	695	22,34,350.00
45.	ಹುಣಸೂರು	243	11,28,373	63	2,82,207.00
46.	ಮೈಸೂರು ವಜೀ	16	86,820	6	28,350.00
	ಒಟ್ಟು	2255	75,63,109.00	764	25,44,907.00
	ಮಂಡ್ಯ	125	11,66,918	62	3,68,306.00
	ಶಿವಮೊಗ್ಗ ಜಿಲ್ಲೆ				
47.	ಭದ್ರಾವತಿ	754	73,84,635	455	27,78,475.00
48.	ಸಾಗರ	54	5,37,548	69	5,20,000.00
49.	ಶಿವಮೊಗ್ಗ	328	8,86,342	150	6,48,770.00
50.	ಶಿವಮೊಗ್ಗ ವಜೀ	90	2,03,248	18	1,00,000.00
		1226	90,11,773.00	692	40,47,245.00
	ಒಟ್ಟು	27,525	13,70,16,590.00	20951	11,22,90,810.00

ಈ)	ಕಾಡು ಪ್ರಾಣಿಗಳು ನಾಡಿಗೆ ಬರದಿರುವಂತೆ ಕಾಡಿನಲ್ಲೇ ಯಥೇಚ್ಛ ಆಹಾರ ವಸ್ತುಗಳ ಕಾಡು ಪ್ರಾಣಿಗಳಿಗೆ ದೊರೆಯುವಂತೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಅರಣ್ಯ ಪ್ರದೇಶದಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಹಂತ ಹಂತವಾಗಿ ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅವಕಾಶ ಮಾಡಲಾಗಿದೆ. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ. ಅಲ್ಲದೆ, ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಉ)	ಕಾಡು ಪ್ರಾಣಿಗಳ ದಾಳಿಯಿಂದ ರಕ್ಷಿಸಲು ಕಾಂಡಿನಂಚಿನ ಗ್ರಾಮಗಳನ್ನು ಸ್ಥಳಾಂತರಿಸುವ ಕುರಿತು ಸರ್ಕಾರದ ನಿಲುವೇನು?	ಕಾಡುಪ್ರಾಣಿಗಳ ದಾಳಿಯಿಂದ ರಕ್ಷಿಸಲು ಕಾಡಂಚಿನ ಗ್ರಾಮಗಳನ್ನು ಸ್ಥಳಾಂತರಿಸುವ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: ಅಪಜೀ 166 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು